ಬೆಂಗಳೂರು
ನಗರ ವಿಶ್ವವಿದ್ಯಾನಿಲಯ
ಆಗು ನೀ ಅನಿಕೇತನ
BE BOUNDLESS
BENGALURU
CITY UNIVERSITY
Office of the Registrar(Evaluation), Central College Campus, Dr. B.R AmbedkarVeedhi,
Bengaluru – 560 001.E-mail: registrarevlubcu@gmail.com, Ph.No.080-22295559

ಸಂಖ್ಯೆ:ಬೆಂ.ನ.ವಿ/ಪ.ವಿ/01/2022-23 ದಿನಾಂಕ: 09.02.2023

**ಸುತ್ತೋಲೆ**

**ವಿಷಯ: UUCMS ಮತ್ತು NAD ಪದ್ಧತಿಯನ್ನು ಪರಿಣಾಮಕಾರಿಯಾಗಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಹೆಚ್ಚಿನ ಮಾಹಿತಿ ಒದಗಿಸಲು ಕಾರ್ಯಗಾರ ವ್ಯವಸ್ಥೆ ಮಾಡಿರುವ ಬಗ್ಗೆ.**

*******

ದಿನಾಂಕ 15.02.2023 ರಂದು ಬೆಳಿಗ್ಗೆ 10.00 ಘಂಟೆಗೆ ಕಾನ್ಪರೆನ್ಸ್ ಹಾಲ್, ಶೇಷಾದ್ರಿಪುರಂ ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜು ಶೇಷಾದ್ರಿಪುರಂ, ಬೆಂಗಳೂರು-560020 ಇಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಪ್ರಥಮ ಧರ್ಜೆ ಕಾಲೇಜುಗಳ ಪ್ರಾಂಶುಪಾಲರು ಮತ್ತು ಅವರ ತಾಂತ್ರಿಕ ಸಿಬ್ಬಂಧಿಗಳಿಗೆ, ಕಾಲೇಜುಗಳಲ್ಲಿ UUCMS , NAD ಮತ್ತು ABC ಪದ್ಧತಿಗಳನ್ನು/ ಪೋರ್ಟಲ್ ಪರಿಣಾಮಕಾರಿಯಾಗಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಶೇಷಾದ್ರಿಪುರಂ ಕಾಲೇಜಿನ ಸಹಭಾಗಿತ್ವದಲ್ಲಿ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರು ಅಧ್ಯಕ್ಷತೆ ವಹಿಸಲಿದ್ದು, ಡಾ. ಭಾಗ್ಯವಾನ್.ಎಸ್. ಮುದಿಗೌಡರ ವಿಶೇಷಾಧಿಕಾರಿ, ಇ-ಗವರ್ನೆನ್ಸ್ ಮತ್ತು ನಿರ್ದೇಶಕರು UUCMS ಹಾಗೂ UUCMS ತಾಂತ್ರಿಕ ಸಿಬ್ಬಂಧಿ ಕಾರ್ಯಾಗಾರದಲ್ಲಿ ಭಾಗವಹಿಸಿ ಹೆಚ್ಚಿನ ಮಾಹಿತಿ ನೀಡಲಿದ್ದಾರೆ. ಆದುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಅವರ ಸಿಬ್ಬಂಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿ, ಹೆಚ್ಚಿನ ಮಾಹಿತಿಯನ್ನು ಪಡೆದು, ಕಾಲೇಜುಗಳಲ್ಲಿ UUCMS NAD ಮತ್ತು ABC ಪೋರ್ಟಲ್‌ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ತಿಳಿಸಲಾಗಿದೆ.

ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ತಾಂತ್ರಿಕ ಸಿಬ್ಬಂಧಿಯೊಂದಿಗೆ ತಪ್ಪದೇ ಕಾರ್ಯಾಗಾರದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

**ಕುಲಸಚಿವರು(ಆಡಳಿತ)**

**ಗೆ,**

1. ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.
2. ಡಾ.ಬಿ.ಜಿ. ಭಾಸ್ಕರ, ಪ್ರಾಂಶುಪಾಲರು, ಶೇಷಾದ್ರಿಪುರಂ ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜು ಶೇಷಾದ್ರಿಪುರಂ, ಬೆಂಗಳೂರು-560020.
3. ಮಾನ್ಯಕುಲಪತಿಗಳು/ಕುಲಸಚಿವರು(ಆಡಳಿತ)/ವಿತ್ತಾಧಿಕಾರಿಗಳ ಆಪ್ತಕಾರ್ಯದರ್ಶಿಗಳು/ ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.